**ದಿಃ 13.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ/ಹಿಂದಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ A.R.I. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿ/ಹಿಂದಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿ/ಹಿಂದಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.300/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ S.I.G. ವಕೀಲರಿಂದ**

ಪ್ರತಿವಾದಿ ಇದೇ ನ್ಯಾಯಾಲಯದಲ್ಲಿ OS No.1440/2023 ಹಾಕಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಪ್ರತಿವಾದಿ ಹಾತ್ ನಕಾಶೆ ಹಾಜರು ಮಾಡಿದ್ದಾರೆ ಎಂದರೆ ಸರಿ. ಸದರಿ ನಕಾಶೆಯಲ್ಲಿ ಆಸ್ತಿಗಳಲ್ಲಿ ವಿವರ ತೋರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಪ್ರತಿವಾದಿ ದಾಖಲೆಗಳನ್ನು ಹಾಜರು ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿ ತನ್ನ ಸ್ವತ್ತಿನ ಉತ್ತರಕ್ಕೆ ಬಾಗಿಲು ಇಟ್ಟಿದ್ದಾರೆ ಎಂದರೆ ಸರಿ. ಪ್ರತಿವಾದಿ ಸದರಿ ಬಾಗಿಲಿನಿಂದ ಓಡಾಡುತ್ತಾರೆ ಎಂದರೆ ಸರಿ. ಪ್ರತಿವಾದಿ ಸದರಿ ಬಾಗಿಲನ್ನು ಕೇಸು ಹಾಕುವ 4 ವರ್ಷಗಳ ಹಿಂದೆ ಕೂರಿಸಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆಯ ಪಶ್ಚಿಮಕ್ಕೆ ಕಂಪೌಂಡ ಇದೆ ಎಂದರೆ ಸರಿ. ಕಂಪೌಂಡನ ದಕ್ಷಿಣ ಮತ್ತು ಉತ್ತರಕ್ಕೆ ಪ್ರತಿವಾದಿಗೆ ಓಡಾಡಲು ಜಾಗ ಇರುತ್ತದೆ ಎಂದರೆ ದಕ್ಷಿಣಕ್ಕೆ ಓಡಾಡಲು ಜಾಗ ಇದೆ ಆದರೆ ಉತ್ತರಕ್ಕೆ ಓಡಾಡಲು ಜಾಗ ಇರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ತನ್ನ ಮನೆಯ ಉತ್ತರದಲ್ಲಿ ಶೆಡ್ ಕಟ್ಟಿದ್ದು ಅದರಲ್ಲಿ ತನ್ನ ವಾಹನವನ್ನು ನಿಲುಗಡೆ ಮಾಡುತ್ತಾರೆ ಎಂದರೆ ಸರಿ. ಪ್ರತಿವಾದಿ ತನ್ನ ಉತ್ತರದ ಶೆಡ್ ನಲ್ಲಿ ವಾಹನ ನಿಲುಗಡೆ ಮಾಡುತ್ತಿರುವ ಸಂಬಂಧ ಎಂದಿಗೂ ನನ್ನ ಮತ್ತು ಪ್ರತಿವಾದಿಯ ನಡುವೆ ಜಗಳ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು

ಪ್ರತಿವಾದಿಯ ನಡುವೆ 2023 ರಲ್ಲಿ ಜಗಳ ಆಗಿತ್ತು. ನಾನು ಜಗಳ ಆದ ಬಗ್ಗೆ ಪೋಲಿಸರಿಗೆ ದೂರು ಸಲ್ಲಿಸಿರುತ್ತೇನೆ. ಆದರೆ ದಾಖಲೆ ಹಾಜರು ಮಾಡಿರುವುದಿಲ್ಲ.

ದಾವಾ ಆಸ್ತಿಯ ಅಳತೆ 720 ಚದರ ಅಡಿ ಇದೆ ಎಂಬ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಅಳತೆ ತೋರಿಸುವ ಬಗ್ಗೆ ಚಲನ್ ಹಾಜರು ಮಾಡಿದ್ದೇನೆ. ನನಗೆ ಮಹಾನಗರ ಪಾಲಿಕೆಯವರು ಚಲನ್ ಕೊಟ್ಟಿದ್ದರು. ಸದರಿ ಚಲನ್ 10 ವರ್ಷ ಹಳೆಯ ಚಲನ್ ಆಗಿರುತ್ತದೆ. ನಾನು ಆ ರೀತಿ ಚಲನ್ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಪಶ್ಚಿಮಕ್ಕೆ ಬೆಳಗಾವಿ ಖಾನಾಪುರ ರಸ್ತೆ ಹೊಂದಿಕೊಂಡು ಫುಟ್ ಪಾತ್ ಇದೆ ಎಂದರೆ ಸರಿ. ಸದರಿ ಫುಟ್ ಪಾತ್ 5 ಅಡಿ ಅಗಲ ಇರಬಹುದು. ಫುಟ್ ಪಾತ್ ನ ಪೂರ್ವಕ್ಕೆ ನೀರು ಸರಬರಾಜು ಮಾಡುವ ಪೈಪಲೈನ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪೈಪಲೈನ ಕೆಳಗಡೆ ಕೆಇಬಿ ಸಂಪರ್ಕದ ವೈರುಗಳು ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಯ ಮೇಲೆ ಹೈ ಟೆನ್ಸನ್ ವೈರ ಹೋಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆದರೆ ವಿದ್ಯುತ ವೈರಗಳು ಇರುತ್ತವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಒಳಗೆ ವಾಟರ್ ಪೆಪಲೈನ ಮತ್ತು ವಿದ್ಯುಚ್ಚಕ್ತಿ ವೈರಗಳು ಹೋಗಿರುತ್ತವೆ ಎಂದರೆ ನೀರಿನ ಪೈಪಲೈನ ಹೋಗಿರುವುದಿಲ್ಲ ಆದರೆ ವಿದ್ಯುಚ್ಚಕ್ತಿ ವೈರಗಳು ಹೋಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ ವಿದ್ಯುಚ್ಚಕ್ತಿ ವೈರ ಮತ್ತು ಪೈಪಲೈನ ಸುಮಾರು 12 ವರ್ಷಗಳ ಹಿಂದೆ ಹಾಕಿರಬಹುದು.

ನಾನು ದಾವಾ ಆಸ್ತಿಯನ್ನು 1997 ರಲ್ಲಿ ಖರೀದಿ ಮಾಡಿದ್ದೇನೆ. ನಾನು ವಿದ್ಯುಚ್ಚಕ್ತಿ ವೈರ ಹಾಕುವಾಗ ತಕರಾರು ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಉತ್ತರಕ್ಕೆ ಕಾಂಬಳೆ ರವರ ಲೇಥ ಇಂಡಸ್ಟ್ರಿ ಇದೆ ಎಂದರೆ ಸರಿ. ಕಾಂಬಳೆ ಯವರು ಅವರ ಆಸ್ತಿಯ ದಕ್ಷಿಣಕ್ಕೆ ವಾಹನವನ್ನು ನಿಲ್ಲಿಸುತ್ತಾರೆ

ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಆಸ್ತಿಯ ಪಶ್ಚಿಮಕ್ಕೆ ಲೈಸನ್ಸ ಪ್ರಕಾರ ಕಂಪೌಂಡ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಲೈಸನ್ಸ ಉಲ್ಲಂಘಣೆ ಮಾಡಿದ್ದಕ್ಕೆ ತಕರಾರು ಮಾಡಿದ್ದೇನೆ. ನಾನು 2019–20 ರಲ್ಲಿ ತಕರಾರು ಮಾಡಿದ್ದೇನೆ. ನಾನು ಲಿಖಿತವಾಗಿ ಯಾವುದೇ ಅಧಿಕಾರಿಗಳಿಗೆ ತಕರಾರು ಕೊಟ್ಟಿಲ್ಲ. ಪ್ರತಿವಾದಿ ತನ್ನ ಲೈಸನ್ಸ ಪ್ರಕಾರ ಕಟ್ಟಡ ಕಟ್ಟಿದ್ದು ಯಾವುದೇ ನಿಯಮ ಉಲ್ಲಂಘಣೆ ಮಾಡಿಲ್ಲ ಎಂದರೆ ಸರಿಯಲ್ಲ. ಮಹಾನಗರ ಪಾಲಿಕೆಯವರು ಲೈಸನ್ಸ ಉಲ್ಲಂಘಣೆ ಪ್ರತಿವಾದಿ ಮಾಡಿದ್ದಾರೆ ಎಂದು ನೋಟಿಸ್ ಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿಯಲ್ಲಿ ಪುಟ್ ಪಾತ್, ಪೈಪಲೈನ ಮತ್ತು ವಿದ್ಯುಚ್ಛಕ್ತಿ ವೈರ ಹೋಗಿರುವುದರಿಂದ ನಾನು ವಾದ ಪತ್ರದಲ್ಲಿ ಬರೆಸಿರುವ ಅಳತೆ ಈಗ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಭೂಸ್ವಾಧೀನ ಮಾಡಿಕೊಂಡ ನಂತರ ಎಷ್ಟು ಅಡಿ ಉಳಿದಿದೆ ಎಂದು ಬರೆಸಿದ್ದೇನೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಉತ್ತರಕ್ಕೆ 35 ಅಡಿ ಹಾಗೂ ದಕ್ಷಿಣಕ್ಕೆ 32 ಅಡಿ ಇದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಬರೆಸಿರುವುದರಿಂದ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು:** ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/–

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಬೆಳಗಾವಿ.